**ದ್ವಿತೀಯ ಭಾಷೆ–ಕನ್ನಡ ಪರ್ಯಾಯ ಶೈಕ್ಷಣಿಕ ಯೋಜನೆ 2021–22 4ನೇ ತರಗತಿ**

**ಮಾಹೆ : ನವೆಂಬರ್–2021**

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| **01** | **ನವೆಂಬರ್–2021<br>1ನೇ ವಾರ** | **ಹಣ್ಣುಕಾಯಿ ಮದುವೆ<br>ಕ್ಷೇತ್ರ :– ಆಲಿಸುವುದು**<br>• ಪರಿಚಿತ ಸನ್ನಿವೇಶದಲ್ಲಿ ಸೂಚನೆಗಳನ್ನು ಪಾಲಿಸುವರು.<br>• ಪರಿಚಿತ ವಸ್ತುಗಳು ಹಣ್ಣು ತರಕಾರಿಗಳ ಹೆಸರು ಹೇಳಿ ಪಟ್ಟಿ ಮಾಡುವರು. | • ಶಿಶುಗೀತೆಗಳನ್ನು ಹೇಳಿಸುವುದು.<br>ಅಮ್ಮ ನನಗೊಂದು ಗೊಂಬೆ ತಂದ್ಕೊಡೆ. . . . . .<br>ವಸ್ತುಗಳನ್ನು ಸೇರಿಸುತ್ತಾ ಹಾಡು ಹೇಳಿಸುವುದು.<br>ಮಕ್ಕಳು ಆಲಿಸುತ್ತಾ ವಸ್ತುಗಳನ್ನು ಪಟ್ಟಿ ಮಾಡಿ ಹೇಳುವರು.<br>• ಚಟುವಟಿಕೆ:– ಶಿಕ್ಷಕರು ಸೂಚನೆಗಳನ್ನು ನೀಡುವರು. ಮಕ್ಕಳು ತಿಳಿದು ಪಾಲಿಸುವರು.<br>✓ ಕೈ ಮೇಲೆತ್ತು.<br>✓ ಕಣ್ಣು ಮುಚ್ಚು.<br>✓ ಕಣ್ಣುತೆರೆ.<br>✓ ಹೊರಗೆ ಹೋಗು.<br>✓ ಕಿಟಕಿ ತೆರೆ.<br>ಮುಂತಾದ ಸೂಚನೆಗಳನ್ನು ನೀಡುವರು.<br>• ಪ್ರಶ್ನೆಗಳನ್ನು ಕೇಳುವುದರ ಮೂಲಕ ಹಣ್ಣುಗಳ ಹೆಸರು ಬಣ್ಣ ರುಚಿಯ ಬಗ್ಗೆ ಮಾಹಿತಿ ಪಡೆಯುವರು.<br>• ಮಕ್ಕಳಿಗೆ ಇಷ್ಟವಾದ ಹಣ್ಣುಗಳ ಪಟ್ಟಿ ಮಾಡುವುದು.<br>• ಮಕ್ಕಳಿಂದ ಮದುವೆಗೆ ಹೋದ ಅನುಭವದ ಬಗ್ಗೆ ಕೇಳಿ ಚರ್ಚಿಸುವುದು. | • ಶಿಶುಗೀತೆ ಹೇಳುವರು.<br>• ಸೂಚನೆಗಳನ್ನು ಅರಿತು ಪಾಲಿಸುವರು.<br>• ಅಭ್ಯಾಸ ಹಾಳೆ–1 |

| | | | | |
|---|---|---|---|---|
| 02 | **ನವೆಂಬರ್–<br>2021<br>2ನೇ ವಾರ** | • ಪದ್ಯವನ್ನು ಆಲಿಸುವರು ಮತ್ತು ರಾಗಬದ್ಧವಾಗಿ ಹೇಳುವರು. ಪದ್ಯವನ್ನು ಕಂಠಪಾಠ ಮಾಡಿ ಹೇಳುವರು. | ಚಟುವಟಿಕೆ:–<br>• ಹಣ್ಣುಗಳ ಚಿತ್ರಗಳಿಗೆ ಬಣ್ಣ ಹಾಕುವುದು.<br>• ತರಕಾರಿಗಳ ಹೆಸರನ್ನು ಹೇಳಿಸುವುದು.<br>• ಸಿಹಿ, ಕಹಿ, ಪೌಷ್ಟಿಕಾಂಶವುಳ್ಳ ತರಕಾರಿಗಳ ಹೆಸರು ಬರೆಯಿಸುವುದು.<br>• ಶಿಕ್ಷಕರು ಪದ್ಯವನ್ನು ಒಂದೊಂದೆ ಸಾಲು ಹೇಳುತ್ತಾ ಮಕ್ಕಳಿಂದ ಹೇಳಿಸುವುದು.<br>• ಮಕ್ಕಳು ಗಮನವಿಟ್ಟು ಆಲಿಸಿ ಪದ್ಯ ಹೇಳುವರು.<br>• ಈ ಪದ್ಯವನ್ನು ಬರೆದ ಕವಿ ವೈ.ಎಸ್. ಕೃಷ್ಣಮೂರ್ತಿ ರವರ ಪರಿಚಯವನ್ನು ಮಕ್ಕಳಿಗೆ ಮಾಡಿಸುವುದು.<br>• ಪದ್ಯವನ್ನುರಾಗಬದ್ಧವಾಗಿ ಹಾಡುತ್ತಾ ಮಕ್ಕಳಿಂದ ಹಾಡಿಸುವರು.<br>• ಪದ್ಯದಲ್ಲಿ ಪ್ರತಿಯೊಂದು ಹಣ್ಣು ಮತ್ತು ತರಕಾರಿಗಳು ನಿರ್ವಹಿಸಿದ ಕಾರ್ಯಗಳ ಬಗ್ಗೆ ಹೇಳುವುದು.<br>• ಮಕ್ಕಳಿಗೆ ಒಂದೊಂದೆ ತರಕಾರಿ ಮತ್ತು ಹಣ್ಣಿನ ಹೆಸರು ಕೊಟ್ಟು ಅವರವರ ಕಾರ್ಯ ಹೇಳಿ ಆಲಿಸುವಿಕೆಯನ್ನುದೃಢೀಕರಿಸುವುದು.<br>• ಚಟುವಟಿಕೆ;– ಪದ್ಯದಲ್ಲಿ ಬಳಕೆಯಾಗಿರುವ ಹಣ್ಣು ತರಕಾರಿಗಳ ಹೆಸರನ್ನು ವಿಂಗಡಿಸಿ ಬರೆಯುವರು.<br>• ಚಿತ್ರ ಬರೆದು ಬಣ್ಣ ಹಾಕುವರು.<br>• ಚಟುವಟಿಕೆ:– ಹಣ್ಣುಗಳ ಹೆಸರು ಹೇಳಿಸುವುದು. ಉದಾ:– ಮೊದಲನೇ ಮಗು ಒಂದು ಹಣ್ಣಿನ ಹೆಸರು ಹೇಳುವುದು, ಎರಡನೇ ಮಗು ಆ ಹೆಸರಿನ ಜೊತೆ ಮತ್ತೊಂದು ಹಣ್ಣಿನ ಹೆಸರನ್ನು | |

| | | | | |
|---|---|---|---|---|
| 03 | **ನವೆಂಬರ್ 3ನೇ ವಾರ** | • ವ್ಯಾಕರಣಾಂಶ:–<br><br>**ಪಾಠ–9**<br>**ಪದಗಳ ಆಟ**<br>**ಕ್ಷೇತ್ರ :–** ಆಲಿಸುವುದು.<br>**ಸಾಮರ್ಥ್ಯ:–** ಭಾಷಾ ಆಟಗಳ ಸರಳ ಸೂಚನೆಗಳನ್ನು ಅರ್ಥ ಮಾಡಿಕೊಳ್ಳುವುದು.<br><br>• ವಿದ್ಯಾರ್ಥಿಗಳಲ್ಲಿ ಆಲಿಸುವ ಕೌಶಲ ಬೆಳೆಸುವುದು. | ಸೇರಿಸಿ ಹೇಳುವುದು. ಹಾಗೆ ಮುಂದುವರೆಯುತ್ತದೆ.<br>• ಮಕ್ಕಳಿಗೆ ಸಿಹಿ, ಕಹಿ, ಸಮ್ಮಿಲನದ ಬಗ್ಗೆ ತಿಳಿಸುವುದು.<br>• ವಿಶ್ವ ಆರೋಗ್ಯದಿನದ ಬಗ್ಗೆ ಹೇಳುವುದು.<br>• ಮಕ್ಕಳು ಹೆಚ್ಚಿನ ವಿಷಯ ತಿಳಿದು ಬರೆಯಲು ಯೋಜನೆ ನೀಡುವುದು.<br>• ಚಟುವಟಿಕೆ:– ಪದ್ಯದಲ್ಲಿನ ಒತ್ತಕ್ಷರ ಪದಗಳನ್ನು ಆಯ್ದು ಬರೆಯುವುದು.<br>• ಕೊಟ್ಟಿರುವ ಪದಗಳಲ್ಲಿ ಸಜಾತಿಯ ಒತ್ತಕ್ಷರಗಳಿಗೆ ವೃತ್ತ ಹಾಕಿಸುವುದು.<br>• ಪದಗಳನ್ನು ಸೇರಿಸಿ ಬರೆಯುವುದು.<br>• ಕೋತಿ ಮತ್ತು ಕುಂಬಾರ ಪದ್ಯ ಹೇಳಿಸುವುದು.<br>• ಪರಿಸರ ಜಾಗೃತಿ ಕುರಿತಾದ ಘೋಷಣೆಗಳನ್ನು ಬರೆಸುವುದು ಮತ್ತು ಹೇಳಿಸುವುದು.<br><br>• ಶಿಕ್ಷಕರು ಒಂದು ಸರಳ ಆಟವನ್ನು ಆಡಿಸುವರು.ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸುವರು, ನಂತರ ಆಟದ ಸೂಚನೆ ನೀಡುವರು. ಮಕ್ಕಳೇ, ಮೊದಲು ನಿಮ್ಮ ಹೆಸರನ್ನು ಹೇಳಬೇಕು ಮತ್ತು ನಿಮ್ಮ ಹೆಸರಿನ ಮೊದಲ ಅಕ್ಷರದಿಂದ ಪ್ರಾರಂಭವಾಗುವ ಒಂದು ವಸ್ತುವಿನ ಹೆಸರನ್ನು ಹೇಳಬೇಕು.<br>• ಶಿಕ್ಷಕರು ಸ್ವರಭಾರದೊಂದಿಗೆ ಪಠ್ಯವನ್ನುಓದುವುದು.<br>• ವಿದ್ಯಾರ್ಥಿಗಳಿಂದ ಪಠ್ಯವನ್ನುಅರ್ಥಪೂರ್ಣವಾಗಿ ಓದಿಸುವುದು. | • ಅಭ್ಯಾಸದ ಹಾಳೆ–2<br><br>• ಮಕ್ಕಳು ಸರಳ ಆಟವನ್ನುಆಡುವರು.<br><br>• ಗದ್ಯದಲ್ಲಿರುವ ಸಂಭಾಷಣೆಯನ್ನು ಓದುವರು. |

| | | | | |
|---|---|---|---|---|
| 04 | ನವೆಂಬರ್ 4ನೇ ವಾರ | • ವಾಕ್ಯ ರಚನಾ ಕೌಶಲ್ಯವನ್ನು ಬೆಳೆಸುವುದು.<br><br>• ವಿದ್ಯಾರ್ಥಿಗಳು ಹೊಸ ಪದಗಳ ಅರ್ಥ ತಿಳಿಯುವರು.<br><br>• ವ್ಯಾಕರಣಾಂಶ:– | • ಶಿಕ್ಷಕರು ಕರ್ತೃ , ಕರ್ಮ, ಕ್ರಿಯಾಪದಗಳ ಸರಿಯಾದ ಜೋಡಣೆಯ ಮೂಲಕ<br>• ವಾಕ್ಯರಚಿಸುವ ವಿಧಾನವನ್ನು ಹೇಳಿ ಕೊಡುವರು.<br>ಉದಾ: ಜ್ಞಾನ ಲಭಿಸುತ್ತದೆ. ಓದು ಶ್ರದ್ಧೆಯಿಂದ ಶಾಲೆಗೆ ಬಂದರು ಮಕ್ಕಳು.<br><br>• ಶಿಕ್ಷಕರು ಪಠ್ಯದಲ್ಲಿರುವ ಹೊಸಪದಗಳ ಅರ್ಥವನ್ನು ಹೇಳಿಕೊಡುವರು.<br>ವಿಭಜಿಸು = ವಿಭಾಗಮಾಡು, ವಿಂಗಡಿಸು.<br>ಚರ್ಚೆ= ಚಿಂತನೆ, ಸಂವಾದ, ವಾಗ್ವಾದ.<br>ಹಾಜರಿ = ಇರುವಿಕೆ, ಉಪಸ್ಥಿತಿ.<br>• ಶಬ್ದಕೋಶ ಬಳಸಿ ಪದಗಳ ಅರ್ಥವನ್ನು ಹುಡುಕಲು ಕಲಿಸುವುದು.<br>• ಅಕ್ಷರಗಳನ್ನು ಸರಿಯಾಗಿ ಜೋಡಿಸಿ, ಅರ್ಥಪೂರ್ಣ ಪದ ರಚಿಸುವುದು.<br>ಉದಾ– ಹಟರೆ – ಹರಟೆ<br>• ಪದ ಬಳಸಿ ಸ್ವಂತ ವಾಕ್ಯರಚನೆ.<br>• ಕೂಡಿಸಿ ಬರೆದು ಅರ್ಥಪೂರ್ಣ ಪದರಚನೆ.<br>• ಮೂರ್ತಿ ಬೇಕಾ ಮೂರ್ತಿ ಆಟ ಆಡಿಸುವುದು.<br>• ಶಿಕ್ಷಕರು ಸೂಚನೆ ನೀಡಿರಾಷ್ಟ್ರ ನಾಯಕರ ಮೂರ್ತಿಗಳ ರೀತಿ ಅಭಿನಯಿಸಿ ತೋರಿಸುವುದು. ಮಕ್ಕಳು ಸೂಚನೆಯಂತೆ ಆಟ ಆಡುವರು. | • ವಿದ್ಯಾರ್ಥಿಗಳು ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯ ರಚಿಸುವರು.<br>• ಅಭ್ಯಾಸ ಹಾಳೆ–3<br><br>• ಹೊಸಪದಗಳ ಅರ್ಥ ತಿಳಿಯುವರು.<br><br>• ಅಭ್ಯಾಸ ಹಾಳೆ–4 |

## ಅಭ್ಯಾಸ ಹಾಳೆ –1

**ತರಗತಿ–4** **ಹಣ್ಣುಕಾಯಿ ಮದುವೆ** **ದ್ವಿತೀಯ ಭಾಷೆ:– ಕನ್ನಡ**

**ಅ. ಕೊಟ್ಟಿರುವ ತರಕಾರಿಯ ಚಿತ್ರಗಳಿಗೆ ಬಣ್ಣಹಾಕಿ ಹೆಸರು ಬರೆಯಿರಿ.**



**ಆ. ಕೊಟ್ಟಿರುವ ಹಣ್ಣಿನ ಚಿತ್ರಕ್ಕೆ ಬಣ್ಣಹಾಕಿ ಹೆಸರು ಬರೆಯಿರಿ.**



ಇ. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ.

1. ಬಾಳೆಗೊನೆ ಬಾಗಿ ನಮಿಸಿ ______________________ ಅಂತಿತ್ತು.
2. ಗಂಡು ,ಹೆಣ್ಣು ,ಹೊಗೆ ____________________ ಕಣ್ಣೀರ್ ಹಾಕ್ತಿತ್ತು.
3. _________________________ ಊಟಕ್ಕೇಳಿ ಅಂತ ಕೂಗ್ತಿತ್ತು.
4. ಮಾವಿನ ಹಣ್ಣು ಹಾಗಲಕಾಯಿ ______________________ .

ಈ. ಪದ್ಯದಲ್ಲಿರುವ ಪ್ರಾಸಪದಗಳನ್ನು ಆರಿಸಿ ಬರೆಯಿರಿ.




ಉ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಯಾವ ಹಣ್ಣು ಮತ್ತು ಯಾವ ಕಾಯಿಗೆ ಮದುವೆ ನಡೆದಿತ್ತು ?

   ______________________________________________________________

2. ಬಾಳೆಕಾಯಿ ಏನು ಮಾಡುತ್ತಿತ್ತು ?

   ______________________________________________________________

3. 'ಹಣ್ಣು ಕಾಯಿ ಮದುವೆ' ಪದ್ಯ ಬರೆದವರುಯಾರು ?

   ______________________________________________________________

**ಅಭ್ಯಾಸ ಹಾಳೆ –2**

**ತರಗತಿ–4** **ಹಣ್ಣುಕಾಯಿ ಮದುವೆ** **ದ್ವಿತೀಯ ಭಾಷೆ:– ಕನ್ನಡ**

**ಅ. ಸಜಾತಿಯ ಒತ್ತಕ್ಷರ ಗುರುತಿಸಿ ಸುತ್ತ್ತಗೆರೆ ಎಳೆಯಿರಿ.**




**ಆ. ನಿಮಗಿಷ್ಟವಾದಒಂದು ಹಣ್ಣು ,ಒಂದುತರಕಾರಿಯಚಿತ್ರ ಬರೆದು ಹೆಸರು ಬರೆಯಿರಿ.**

**ಇ. ಮಾದರಿಯಂತೆ ಖಾಲಿ ಅಂಕಣವನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

ಮಾದರಿ– ಅನ್ನುತ್ತಾ + ಇತ್ತು = ಅನ್ನುತ್ತಿತ್ತು.---------ಅಂತಿತ್ತು.

1. ಊದುತ್ತ + ಇತ್ತು = ______________________ → ಊದ್ತಿತ್ತು.
2. ಹಾಕುತ್ತ + ಇತ್ತು = ______________________ → ಹಾಕ್ತಿತ್ತು
3. ಹೇಳುತ್ತ + ಇತ್ತು = ______________________ → ಹೇಳ್ತಿತ್ತು.
4. ಮಾಡುತ್ತ +ಇತ್ತು = ______________________ → ಮಾಡ್ತಿತ್ತು.

**ಈ. ಕೊಟ್ಟಿರುವ ಪದಗಳಿಗೆ ವಿರುದ್ಧ ಪದಗಳನ್ನುಆಯ್ದು ಬರೆಯಿರಿ.**

1. ಸಿಹಿ X ______________________
2. ಶ್ರೀಮಂತ X ______________________
3. ಸಹನೆ X ______________________
4. ಮುಚ್ಚು X ______________________

ಬಡವ, ತೆರೆ,
ಕಹಿ, ಅಸಹನೆ

**ಉ. ಪದಗಳ ಅರ್ಥ ಬರೆಯಿರಿ:**

1. ನಮಿಸು = ______________________
2. ಹಿಗ್ಗು = ______________________
3. ಬಳಕು = ______________________
4. ವೀಳ್ಯ = ______________________

## ಅಭ್ಯಾಸ ಹಾಳೆ -3

**ತರಗತಿ-4 ಪದಗಳ ಆಟ ದ್ವಿತೀಯ ಭಾಷೆ:- ಕನ್ನಡ**

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಶಿಕ್ಷಕರು ಮಕ್ಕಳಿಗೆ ಯಾವ ಆಟ ಆಡಿಸುವುದಾಗಿ ಹೇಳಿದರು ?
______________________________

2. ಯಾವ ಗುಂಪು ಜಯಶಾಲಿಯಾಗಿದೆ ಎಂದು ಶಿಕ್ಷಕರು ಹೇಳಿದರು?
______________________________

3. 'ಅ' ಗುಂಪು ವಾಕ್ಯ ಹೇಳುತ್ತಿರುವಾಗ 'ಬ' ಗುಂಪು ಏನು ಮಾಡಬೇಕು ?
______________________________

**ಆ. ಯಾರು, ಯಾರಿಗೆ ಹೇಳಿದರು?**

1. "ಮಕ್ಕಳೇ, ನಾನು ನಿಮಗೆ ಈ ದಿನ ಪದಗಳ ಆಟ ಆಡಿಸುತ್ತೇನೆ."
ಯಾರು ಹೇಳಿದರು ? ______________________________
ಯಾರಿಗೆ ಹೇಳಿದರು ?______________________________
2. "ಆ ಹೊತ್ತಿಗೆ ಹೊಟ್ಟೆ ತಾಳ ಹಾಕುತ್ತಿರುತ್ತದೆ."
ಯಾರು ಹೇಳಿದರು ? ______________________________
ಯಾರಿಗೆ ಹೇಳಿದರು ?______________________________

**ಇ. ಕೆಳಗೆ ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.**

1. ಹಾಜರಿ ______________________________
2. ಆದರ್ಶ______________________________

**ಈ. ಕೆಳಗಿನ ಪದಗಳಿಗೆ ಶಬ್ದಕೋಶವನ್ನು ಬಳಸಿ ಸರಿಯಾದ ಅರ್ಥ ಬರೆಯಿರಿ.**

1. ರದ್ದು = ______________________________
2. ಚರ್ಚೆ = ______________________________

**ಉ. ಮಾದರಿಯಂತೆ ಕೊಟ್ಟಿರುವ ಪದಗಳ ಸರಿಯಾದ ರೂಪ ಬರೆಯಿರಿ.**

ಮಾದರಿ:- ಹಟರೆ ---→ ಹರಟೆ

1. ಲಿಶಾಯಜ ---→ ______________
2. ವಿಶ್ರಾಂತಿ --→ ______________
3. ಸುಚಿಗೊಳಿಸು --→ ______________

**ಊ. ಕೂಡಿಸಿ ಬರೆಯಿರಿ:**

1. ಶುಭ + ಉದಯ = ______________
2. ಕಾಲ + ಅವಕಾಶ = ______________
3. ನಾಲಗೆ + ಅಲ್ಲಿ = ______________

**ಋ. ಬಿಟ್ಟಿರುವ ಸ್ಥಳವನ್ನು ಸರಿಯಾದ ಪದಗಳಿಂದ ತುಂಬಿ:**

1. ವಾಕ್ಯಗಳು ______________ ಆಗಕೂಡದು.
2. ಶಿಕ್ಷಕರು ತರಗತಿ ಪ್ರವೇಶಿಸಿದ ತಕ್ಷಣ ಮಕ್ಕಳಿಗೆ ______________ ಹೇಳಿದರು.
3. ಪ್ರತಿ ಗುಂಪಿಗೆ ______________ ನಿಮಿಷ ಕಾಲಾವಕಾಶವಿರುತ್ತದೆ.